ಪರಿಸ್ಥಿತಿ ಏನಿದ್ದರೂ
'ಇಲ್ಲಿದ್ದೇನೆ ನಾನು'
ಎಂದು ಅನ್ನಬಲ್ಲ ನಿನ್ನ ಸಾಮರ್ಥ್ಯದಲ್ಲಿ.
ಇಲ್ಲಿಂದ, ಭವಿಷ್ಯದ ಬಗೆಗೆ
ನೀನು ಇಷ್ಟು ಮಾತ್ರ ಶುಷ್ಕ ತೊಂದರೆ ತೆಗೆದುಕೊಳ್ಳುವೆ.
ದಿನದಿಂದ ದಿನಕ್ಕೆ ಸಂತೋಷ ಏನೆಂದು ತಿಳಿದುಕೊಂಡೆ;
ನಿನ್ನ ಅತಿಥಿಯಾಗಿ ನಾನಾಗಿಯೇ ಕಲಿತುಕೊಂಡೆ
ನಮ್ಮ ಸಾಮೂಹಿಕ ವೇದನೆಯನ್ನು ಸಿಂಗರಿಸುವುದನ್ನು.
ರಾತ್ರಿ ಕೊನೆಗೂ ಅವತರಿಸಿದಾಗ, ನಿಟ್ಟುಸಿರಿನೊಂದಿಗೆ
ತಿರುಗಿದೆ ಕತ್ತಲೆಯತ್ತ.
ಮೊಟ್ಟೆಯನ್ನೀಗ ಒಡೆಯುತ್ತೇನೆ, ನೀನು
ಪಿಸುಗುಟ್ಟಿದೆ
ನನಗೆ ಗುಡ್ ನೈಟ್ ಹೇಳುವಾಗ.
ನಾನೆಂದುಕೊಂಡೆ
ಇದು ಕಲ್ಪನೆಯ ಸಮಾಧಿ.

ಭಾನು ಅವರ ಬರಹಗಳನ್ನು ಹಗುರವಾಗಿ ಓದಲಾಗದು. ಆ ಮಟ್ಟಿಗೆ ಈ ಉಪಭೋಗಿ ಸಂಸ್ಕೃತಿಯನ್ನು ಪ್ರಶ್ನಿಸುವ ಪ್ರಯತ್ನ ಅದರಲ್ಲಿದೆ. ಇಲ್ಲಿ ಬೆರಗಿನ ಮತ್ತು ಭೀಕರ ಚಿತ್ರಗಳು ನಮಗೆ ಎದುರಾಗುತ್ತವೆ. ಅವು ಪಡೆಯುವ ನುಡಿರೂಪ ನಮ್ಮನ್ನು ಕೆರಳಿಸುತ್ತದೆ, ನಮ್ಮ ಮನಸನ್ನು ಕೆದಕುತ್ತದೆ, ಸ್ಮೃತಿಯನ್ನು ಕದಡುತ್ತದೆ. ಕತೆಗಳು ತಮ್ಮನ್ನು ತಾವು ಓದುಗರಿಗೆ ಒಪ್ಪಿಸಿಕೊಳ್ಳುವುದಿಲ್ಲ. ಹಾಗಾಗಿಯೇ, ಅವುಗಳನ್ನು ಓದುವುದೆಂದರೆ ಅವುಗಳ ಅರ್ಥರೂಪವನ್ನು ನಾವೇ ವಿನ್ಯಾಸಗೊಳಿಸಿದಂತೆ. ಅವರ ಗದ್ಯ, ಪದ್ಯ, ಕಥನ ಸಂಗ್ರಹಗಳು ಕಿಟಕಿಯಾಚೆ ತೆರೆಯುವ ಚಿತ್ರಮಾಲೆಯಂತೆ ತೂಗುತ್ತಿರುತ್ತವೆ. ವಿಭಿನ್ನ ಬಣ್ಣ, ವಿನ್ಯಾಸದ, ವಿಶಿಷ್ಟ ವಸ್ತುಗಳ ಛಾಯೆಗಳಿರುವ ಚಿತ್ರಗಳು ಅಲ್ಲಿವೆ. ಅದರಲ್ಲಿ ಮಣ್ಣು, ಗಾಳಿ, ಕಾಡು, ಕಾಡೊಳಗಿನ ತೋಳ–ತರುಣಿಯರು, ಯಂತ್ರಮಿಶ್ರಿತ ಮಾನವ ದೇಹಗಳೊಂದಿಗೆ ಎಲ್ಲೆಲ್ಲೆಯದೋ ನೆನಪುಗಳಿವೆ. ಚಿತ್ರಿಸುತ್ತಿರುವ ಅಂತರಾಳಗಳನ್ನು ಕಿಸೆಯಲ್ಲಿಟ್ಟುಕೊಂಡು ಪೇಲವ ನಗು ಬೀರುವ ವಲಸಿಗರಿದ್ದಾರೆ.

ಅಪರಿಚಿತರ ಮನೆಯ ಹೊಸ್ತಿಲಲ್ಲಿ ನಿಂತು ನೀರು ಕೇಳಿದಾಗ ನಾವು ಬೀರಿದ ನಗು ಅದೇನೋ ಆಶ್ವಾಸನೆ ಕೊಡುತ್ತಿರುತ್ತದೆ – ಅರ್ಧ ನಮಗೆ, ಅರ್ಧ ಅವರಿಗೆ. ಭಾನು ಅವರ ಕಾವ್ಯವೂ ಇದೇ ಬಗೆಯ ಆತಂಕಗಳನ್ನು, ಅರ್ಧಸತ್ಯಗಳನ್ನು ವಿಶ್ಲೇಷಿಸುತ್ತದೆ. 'ಕಲೆಯಲ್ಲಿ ಬಿಕ್ಕಟ್ಟು ಎಂದರೆ / ಮನೆಯ ಕುರಿತು / ಸಾಮಾಜಿಕ ವಿರಾಮದ ತಾವು/ ಎಂದು ನೀನು ಚಿಂತಿಸುವುದಲ್ಲ /ಬದಲಿಗೆ ಅದೊಂದು / ಇಕ್ಕಟ್ಟು ಕಣಿವೆಯ ಮೇಲಿರುವ/ ಚಾಚು ಬಂಡೆ.'

### ಕಮಲಾಕರ ಕಡವೆ

ಕವಿ ಕಮಲಾಕರ ಕಡವೆ ಅನುವಾದಕರೂ ಹೌದು. 'ಚೂರುಪಾರು ರೇಶಿಮೆ', 'ಮುಗಿಯದ ಮಧ್ಯಾಹ್ನ' ಮತ್ತು 'ಜಗದ ಜತೆ ಮಾತುಕತೆ' ಅವರ ಕವನ ಸಂಕಲನಗಳು. ದಲಿತ ಪ್ಯಾಂಥರ್ಸ್ ಜನಕ ನಾಮದೇವ್ ಧಸಾಲ್ ಅವರ ಕವನಗಳನ್ನು ಅನುವಾದಿಸಿ 'ನಾಮದೇವ್ ಧಸಾಲ್ ವಾಚಿಕೆ' ಪ್ರಕಟಿಸಿದ್ದಾರೆ.